

ಮನೆಗೆ ಬಂದು, ಅವಳ ತಂದೆಗೆ "ಅಂಕಲ್ ಟೈಗರ್ ಸಿಕ್ಕಿದೆ, ತೋರಿಸ್ತೀನಿ. ನೀವು ಇಂಚರಳ ಜೊತೆ ಬನ್ನಿ" ಎಂದಳು. ಅವರೆಲ್ಲ ಆಶ್ಚರ್ಯದಿಂದ ಅವಳ ಜೊತೆ ಹೊರಟರು.

ಪಿಂಕಿ ಪಕ್ಕದ ರಸ್ತೆಯ ಒಂದು ಮನೆಯ ಕರೆಗಂಟೆ ಒತ್ತಿದಳು. ಅವರು ಬಾಗಿಲು ತೆಗೆದ ತಕ್ಷಣ, ಪಿಂಕಿ ಮೊದಲೇ ಹೇಳಿದ್ದಂತೆ ಇಂಚರ 'ಟೈಗರ್... ಟೈಗರ್' ಎಂದು ಕರೆದಳು. ಅವಳ ಧ್ವನಿ ಕೇಳಿ ಓಡಿ ಬಂದ ಬೆಕ್ಕಿನಮರಿಯನ್ನು ಎತ್ತಿಕೊಂಡಳು. ಆ ಮನೆಯವರು ಆಶ್ಚರ್ಯದಿಂದ ಇವರನ್ನು ನೋಡುತ್ತಿದ್ದರು. ಪಿಂಕಿ ಅವರಿಗೆ, 'ನಮ್ಮ ಬೆಕ್ಕಿನ ಮರಿನಾ ನಾವು ಕರೆದುಕೊಂಡು ಹೋಗುತ್ತಿದ್ದೇವೆ' ಎಂದಳು.

ಅವರು 'ಇಲ್ಲ ಇಲ್ಲ, ಇದು ನಮ್ಮನೆ ಬೆಕ್ಕಿನಮರಿ' ಎಂದು ಹೇಳಿ, ಬೆಕ್ಕಿನಮರಿಯನ್ನು ಕಿತ್ತುಕೊಳ್ಳಲು ಮುಂದಾದರು. 'ನೀವು ನಮ್ಮ ಮನೆಯಿಂದ ಬೆಕ್ಕಿನಮರಿ ಕದ್ದಿರುವುದು ಸಿಸಿ ಟಿವಿಯಲ್ಲಿ ಪತ್ತೆಯಾಗಿದೆ' ಎಂದಳು ಪಿಂಕಿ. ಅವರು ಹಿಂದೆ ಸರಿದು ನಿಂತರು.

ಮನೆಗೆ ಹಿಂದಿರುಗಿದ ಅನಂತರ, ಇಂಚರಳ ತಂದೆ, 'ಅವರ ಮನೆಯಲ್ಲಿ ಟೈಗರ್ ಇರುವುದು ನಿನಗೆ ಹೇಗೆ ಗೊತ್ತಾಯಿತು?' ಎಂದು ಕೇಳಿದರು. 'ಎದುರು ಮನೆಯ ತಾತ ಹೇಳಿದ ಹಾಗೆ ಅಕ್ಕಪಕ್ಕದ ರಸ್ತೆಯಲ್ಲಿ ಇದೆ ಅಂತ ಗೊತ್ತಾಗಿತ್ತು. ಇವತ್ತು ಬೆಳಗ್ಗೆ ಬೇಗ ಎದ್ದುಹೋಗಿ ಇಲ್ಲಿ ಹಾಲನ್ನು ಕೊಡುವ ಅಂಕಲ್ ಹತ್ತಿರ 'ಈಗ ಎರಡು ಮೂರು ದಿನದಿಂದ ಯಾರಾದರೂ ಅರ್ಧ ಲೀಟರ್ ಹಾಲು ಹೆಚ್ಚಿಗೆ ತೆಗೆದುಕೊಳ್ಳುತ್ತಿದ್ದಾರ?' ಅಂತ ವಿಚಾರಿಸಿದೆ. ಅವರು ಈ ಮನೆ ತೋರಿಸಿದರು. ಅವರ ಮನೆ ಮುಂದೇನೆ ಒಂದಷ್ಟು ಹೊತ್ತು ಸೈಕಲ್ ಸವಾರಿ ಮಾಡಿದೆ. ಒಂದು ಸಲ ಅವರು ಬೆಕ್ಕಿನಮರಿ ಹಿಡಿದುಕೊಂಡು ಹೊರಗೆಬಂದರು. ತಕ್ಷಣ ನಿಮ್ಮ ಮನೆಗೆ ಬಂದೆ' ಪಿಂಕಿ ಹೇಳಿದಳು.

'ನೀನು ಬಹಳ ಬುದ್ಧಿವಂತೆ, ಒಳ್ಳೆಯ ಪತ್ತೆದಾರಿ ಕೆಲಸ ಮಾಡಿದೆ!' ಎಂದು ಇಂಚರಳ ತಂದೆತಾಯಿ ಸಂತೋಷದಿಂದ ಹೇಳಿದರು. ಇಂಚರ 'ಥ್ಯಾಂಕ್ಯು' ಎನ್ನುತ್ತಾ ಸ್ನೇಹಿತೆಯನ್ನು ಅಪ್ಪಿಕೊಂಡಳು. ಟೈಗರ್ ಮಿಯಾವ್ ಎನ್ನುತ್ತ ಪಿಂಕಿಯ ಕಾಲಿಗೆ ತನ್ನ ಮೈಯನ್ನು ಉಜ್ಜಿತು.